# ಜೆಎಸ್ಎಸ್ ಸಂಸ್ಕೃತ ಕಾಲೇಜು, ಸುತ್ತೂರು

ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

---

## 'ಸಂಸ್ಕೃತ ಎಂದರೆ ಅತ್ಯಂತ ಪರಿಶುದ್ಧವಾದುದು ಎಂದರ್ಥ'

**ಸುತ್ತೂರು,ಜು.27–** ಸಂಸ್ಕೃತ ಎಂದರೆ ಅತ್ಯಂತ ಪರಿಶುದ್ಧವಾದುದು ಎಂದರ್ಥ ಎಂದು ಮೈಸೂರಿನ ಮರಿಮಲ್ಲಪ್ಪ ಪದವಿಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ. ಬಿ.ಎಸ್. ಪರ್ವತರಾಜುರವರು ಅಭಿಪ್ರಾಯಪಟ್ಟರು.

ಸುತ್ತೂರಿನಲ್ಲಿ ಆಯೋಜಿಸಿದ್ದ ಗುರುಪೂರ್ಣಿಮಾ ಕಾರ್ಯಕ್ರಮದಲ್ಲಿ ಸಂಸ್ಕೃತ ವಿದ್ವತ್ ಮಧ್ಯಮಾ ತರಗತಿಗಳ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಿ ಮಾತನಾಡಿದ ಅವರು, ಮರದ ಕೊರಡು ಸುಂದರ ಶಿಲ್ಪವಾಗುವುದೇ ಪರಿಶುದ್ಧತೆಯ ರೂಪ. ವಿಶ್ವದ ಪ್ರಾಚೀನ ಭಾಷೆಗಳಲ್ಲಿ ಒಂದಾದ ಸಂಸ್ಕೃತ ಭಾಷೆ ಭಾರತೀಯರದ್ದು ಎಂಬುದು ಹೆಮ್ಮೆಯ ವಿಚಾರ. ಅದು ಶ್ರೀಮಂತ ಭಾಷೆಯೂ ಹೌದು. ಅಮೆರಿಕಾದ ನಾಸಾ ವಿಜ್ಞಾನ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶ್ವದ 400 ವಿಜ್ಞಾನಿಗಳಲ್ಲಿ ಭಾರತೀಯರೇ 175 ಮಂದಿ ಇದ್ದಾರೆ ಎಂಬುದು ಅತ್ಯಂತ ಅಭಿಮಾನದ ಸಂಗತಿ ಎಂದು ತಿಳಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಸುತ್ತೂರಿನ ಜೆಎಸ್ಎಸ್ ವಸ್ತುಸಂಗ್ರಹಾಲಯದ ಕ್ಯುರೇಟರ್ ಶ್ರೀ ಕೆ. ವೆಂಕಟೇಶ್ವರರಾವ್‌ರವರು ವಿದ್ಯಾರ್ಥಿಗಳು ತಾವು ಕಲಿತ ಶಾಲೆ ಮತ್ತು ಕಲಿಸಿದ ಗುರುಗಳನ್ನು ಮರೆಯಬಾರದು. ಆಚಾರ್ಯ ದೇವೋಭವ ಎಂದು ಗುರುವಿಗೆ ಮಹತ್ತರ ಸ್ಥಾನ ನೀಡಿದ ದೇಶ ನಮ್ಮದು. ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವಲ್ಲಿ ಶಾಲೆ ಆಶ್ರಯ ನೀಡಿದರೆ, ಗುರುಗಳು ಉತ್ತಮ ಮಾರ್ಗದರ್ಶನ ನೀಡುವ ಮೂಲಕ ನಮ್ಮ ಏಳಿಗೆಗೆ ನಾಂದಿಯಾಡುತ್ತಾರೆ. ಆದ್ದರಿಂದ ಗುರುಗಳನ್ನು ಅವರು ಕಲಿಸಿದ ವಿದ್ಯೆಯ ಮೂಲಕ ಸ್ಮರಿಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಜೆಎಸ್ಎಸ್ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಸುನಂದಾ ಭೂಪಾಳಿಯವರು ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಶಾಲಾ ಮಕ್ಕಳು ಪ್ರಾರ್ಥಿಸಿದರೆ, ವಿದ್ವಾನ್ ಕೆ.ಎಸ್. ಪುರುಷೋತ್ತಮ್ ವಂದಿಸಿದರು. ವಿದ್ವಾನ್ ಕೆ.ಬಿ ಮಲ್ಲಿಕಾರ್ಜುನ್  ನಿರೂಪಿಸಿದರು. ಸುತ್ತೂರಿನ ಜೆಎಸ್ಎಸ್ ಸಂಸ್ಥೆಗಳ ಎಲ್ಲಾ ವಿಭಾಗಗಳ ಮುಖ್ಯಸ್ಥರು ಹಾಜರಿದ್ದರು.

ಪ್ರಾಂಶುಪಾಲರು




ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳಲ್ಲಿ ಆಯೋಜಿಸಿದ್ದ ಗುರುಪೂರ್ಣಿಮಾ ಕಾರ್ಯಕ್ರಮದಲ್ಲಿ ಮೈಸೂರಿನ ಮರಿಮಲ್ಲಪ್ಪ ಪದವಿಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ. ಬಿ.ಎಸ್. ಪರ್ವತರಾಜುರವರು ಮಾತನಾಡಿದರು. ಚಿತ್ರದಲ್ಲಿ ಕ್ಯುರೇಟರ್ ಶ್ರೀ ಕೆ. ವೆಂಕಟೇಶ್ವರರಾವ್, ಪ್ರಾಂಶುಪಾಲರಾದ ಶ್ರೀಮತಿ ಸುನಂದಾ ಗುರಪ್ಪ ಭೂಪಾಳಿ ಹಾಗೂ ಸಂಸ್ಥೆಯ ಮುಖ್ಯಸ್ಥರುಗಳಿದ್ದಾರೆ.



ಗುರುಪೂರ್ಣಿಮಾಕ್ಕೆ ಇದುವೇ ಶಿಷ್ಯರ ಪ್ರಣಾಮಾ.....